

ಆಗ್ಲಿಲ್ಲ. ಬೆಂಗಳೂರಿನಲ್ಲಿದ್ದಾಗ ಅಪ್ಪಅಮ್ಮ ಇಬ್ರೂ ಪತ್ರ ಬರೆಸ್ತಿದ್ರು. ಯು.ಕೆ.ನಲ್ಲಿ ನಾಲ್ಕು ವರ್ಷ ಉಳಿದದ್ದಕ್ಕೆ ಪತ್ರ ಬರೆಯೋ ಹಾಗೂ ಇರ್ಲಿಲ್ಲ ಮತ್ತೆ ನಮ್ಮ ಊರಿಗೆ ಮೊಬೈಲ್ ನೆಟ್‌ವರ್ಕ್ ರೀಚಾಗಲ್ಲ. ಹಾಗಾಗಿ, ಕಾಂಟಾಕ್ಟೇ ತಪ್ಪಿಹೋಯ್ತು' ಎಂದು ಉದ್ದಕ್ಕೆ ಮಾತನಾಡಿದ ಸುಲೇಖನಿಗೆ ಪಟ್ಟನೆ ನೆನಪಾಗಿ, 'ನಿಮ್ಮ ಹೆಸರು' ಎಂದ.

'ಸಾಂಬಮೂರ್ತಿ. ಕೆಪಿಸಿಯಲ್ಲಿ ಅಕೌಂಟೆಂಟ್ ಆಗಿದ್ದೆ. ಈಗ ನಿವೃತ್ತನಾಗಿದ್ದೀನಿ' ಎಂದು ಮತ್ತದೇ ಶುಭ್ರ ನಗು ನಕ್ಕರು.

ಇನ್ನೇನು ಭಗವಂತನ ದರ್ಶನವಾಗುತ್ತದೆ ಎಂದು ಅಲ್ಲಿ ಕೂತವರೆಲ್ಲರೂ ತದೇಕಚಿತ್ತದಿಂದ ನೋಡುತ್ತಿದ್ದ 'ಇನ್' ಎನ್ನುವ ಬಾಗಿಲಿನ ಮೇಲಿದ್ದ ಎಲೆಕ್ಟ್ರಾನಿಕ್ ಪರದೆ ಅಷ್ಟೊತ್ತಿಗೇ ಜೀವ ತಳೆಯಿತು. ಆವರೆಗೆ ತಮ್ಮಲ್ಲಿಯೇ ಮಗ್ನರಾಗಿ ಕುಳಿತಿದ್ದ ಮಂದಿ ಒಮ್ಮೆಲೇ ಜೀವ ಬಂದವರಂತೆ ಚುರುಕಾದರು. ಪರದೆಯಲ್ಲಿ ಟೋಕನ್ ಸಂಖ್ಯೆಗಳ ಜೊತೆಗೆ ಧ್ವನಿ ಕೇಳಿ ಲಗುಬಗೆಯಿಂದ ಮೊದಲ ಅಂಕಿಯವನು ನಿಂತಿದ್ದನ್ನು ನೋಡಿ, ತಮ್ಮ ಕೈಯಲ್ಲಿದ್ದ ಟೋಕನ್ ಅಂಕೆಯ ಅನುಸಾರ ಗಡಿಬಿಡಿಯಲ್ಲಿ ಸರದಿಯಲ್ಲಿ ನಿಲ್ಲತೊಡಗಿದರು.

ತನ್ನದಂತೂ ಸರದಿಯಲ್ಲಿ ಕೊನೆಯದಾಗಿರಬಹುದು; ಅಷ್ಟರ ನಂತರ ಬಂದವರೂ ಇರಬಹುದು. ತನ್ನ ಪಕ್ಕ ಕೂತ ಸಾಂಬಶಿವ ಎನ್ನುವ ವೃದ್ಧ ತನಗಿಂತ ಎಷ್ಟೋ ಮೊದಲು ಬಂದವರು ಇರಬಹುದು, ಆದರೂ